ಹಜಾರಿಕಾ ಅವರು ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ, ಅಂದರೆ 2000ನೇ ಇಸವಿಯಲ್ಲಿ ಸತ್ರಿಯಾ ನೃತ್ಯಕ್ಕೆ ಶಾಸ್ತ್ರೀಯ ಮನ್ನಣೆ ದೊರೆಯಿತು.

ಭರತನಾಟ್ಯದಲ್ಲಿ ಅಲರಿಪು, ಜತಿಸ್ವರ ಮುಂತಾಗಿ ಒಂದು ನೃತ್ಯಮಾರ್ಗವು ರೂಪುಗೊಂಡಂತೆ, ಒಡಿಸ್ಸಿ ನೃತ್ಯದಲ್ಲಿ ಪಲ್ಲವಿ, ಬಟು ಇರುವ ಹಾಗೆಯೇ ಸತ್ರಿಯಾದಲ್ಲಿ ಸಲಿ ನಾಜ್, ಝುಮುರಾ ನಾಜ್, ಬಹಾನಾಝ್ ಸೇರಿದಂತೆ ಅನೇಕ ನೃತ್ಯಗಳಿವೆ. ಹಾಗಿದ್ದರೆ ಇದಕ್ಕೊಂದು ಮಾರ್ಗ ಪರಂಪರೆಯನ್ನು ರೂಪಿಸುವುದು ಮುಖ್ಯವಾಗುವುದಿಲ್ಲವೇ ಎಂಬ ಪ್ರಶ್ನೆ ಎದುರಾಗಿತ್ತು. ಸತ್ರಿಯಾ ಎನ್ನುವ ಪದವು ಸತ್ರವನ್ನು ಪ್ರತಿನಿಧಿಸುತ್ತದೆ. ಸತ್ರದ ತತ್ವಗಳ ಪ್ರತಿಪಾದನೆಯೇ ಸತ್ರಿಯಾದಲ್ಲಿ ಅಡಗಿದೆ. ಈ ಪರಂಪರೆಯನ್ನು ಗಮನದಲ್ಲಿ ಇಟ್ಟುಕೊಂಡು ಇದಕ್ಕೊಂದು ಮಾರ್ಗವನ್ನು ರೂಪಿಸುವ ಕೆಲಸವೂ ನಡೆಯಿತು.

◆ **ಕೊರಿಯೋಗ್ರಫಿ ಪರಿಕಲ್ಪನೆಯನ್ನು ಈ ನೃತ್ಯಕ್ಕೆ ಅಳವಡಿಸಿದ ಸಂದರ್ಭಗಳ ಬಗ್ಗೆ ಹೇಳುವಿರಾ?**

ನಮ್ಮ ಬಳಿ ಈಗಾಗಲೇ ಇರುವ ಪುರಾತನ ಕೃತಿಗಳು ಒಂದು ಉತ್ತಮ ಕೊರಿಯೋಗ್ರಫಿಗೆ ಉದಾಹರಣೆಯಾಗಿ ನಿಲ್ಲಬಲ್ಲವು. ಇವುಗಳನ್ನು ಕೀರ್ತನ್‌ಘರ್‌ಗಳಲ್ಲಿ ಈಗಾಗಲೇ ಪ್ರಸ್ತುತಪಡಿಸಲಾಗುತ್ತಿದೆ. ಕೀರ್ತನ್‌ಘರ್‌ಗಳು ಧಾರ್ಮಿಕ ಆಚರಣೆಯ ಸೇವೆಗಳನ್ನು ಸಲ್ಲಿಸುವ ಕೇಂದ್ರಗಳಾಗಿರುತ್ತವೆ. ಕೀರ್ತನ್‌ಘರ್ ಅಥವಾ ನಾಮ್‌ಘರ್‌ಗಳಲ್ಲಿ ಪ್ರಸ್ತುತಪಡಿಸಿದ ರೀತಿಯಲ್ಲಿಯೇ ಅವುಗಳನ್ನು ನಗರದ ಚೌಕಾಕಾರದ ವೇದಿಕೆಗಳಲ್ಲಿ ಪ್ರಸ್ತುತಪಡಿಸಲು ಸಾಧ್ಯವಾಗದು. ಕೀರ್ತನ್‌ಘರ್‌ಗಳಲ್ಲಿ ಭಕ್ತಿಯೇ ಪ್ರಧಾನವಾಗಿರುತ್ತದೆ. ವೃತ್ತಾಕಾರದ ಚಲನೆ, ಭಕ್ತಿಯಿಂದಲೇ ನೃತ್ಯವನ್ನು ನೋಡುವ ಪ್ರೇಕ್ಷಕರು ಅಲ್ಲಿರುತ್ತಾರೆ. ವೇದಿಕೆಗಳಲ್ಲಿ ಪ್ರಸ್ತುತಪಡಿಸುವ ನೃತ್ಯದಲ್ಲಿ ಅದೇ ಬೋಲ್‌ಗಳನ್ನು, ಅದೇ ನೃತ್ಯಚಲನೆಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ಪರಂಪರೆಗೆ ಚ್ಯುತಿ ಬಾರದಂತೆ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲೇಬೇಕು. ಕೊರಿಯೋಗ್ರಫಿಯಲ್ಲಿ ಮುಖ್ಯವಾಗಿ ನಾವು 'ಪರಿಸೀಮಾ'ಗಳನ್ನು ಅಂದರೆ ಮಿತಿಗಳನ್ನು ಅರ್ಥಮಾಡಿಕೊಳ್ಳಬೇಕು. ಮಿತಿಗಳೆಂದರೆ

